**OS ನಂ.45 /2018 ಪಿ .ಡಬ್ಲೂ-1**

**ಸಾಕ್ಷಿಯನ್ನು ದಿಃ18 .06.2019 ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ.P .N.S ವಕೀಲರಿಂದಃ**

ಶಾಂತಾರವರು ನನಗಿಂತ 15 ವರ್ಷ ವಯಸ್ಸು ಕಡಿಮೆ ಎಂದರೆ ಸರಿ. ಪ್ರತಿವಾದಿ 5 ಶಾಂತಾರವರು ಮದುವೆಯಾಗಿ ಸುಮಾರು 20 ವರ್ಷ ಆಗಿರಬಹುದು. ನನ್ನ ತಂದೆಯ ಹೆಸರು ನಾಮದೇವ ಇದ್ದು ಅವರ ತಂದೆಯ ಹೆಸರು ಡಾಕು ಎಂದರೆ ಸರಿ. ನನ್ನ ಅಜ್ಜನಿಗೆ ನನ್ನ ತಂದೆ ಸೇರಿ 6 ಜನ ಮಕ್ಕಳು. ನನ್ನ ಅಜ್ಜ ಡಾಕುನಿಗೆ ಸ್ವಂತ ಜಮೀನು ಇದ್ದಿಲ ಎಂದರೆ ಸರಿ. ಸಾಕ್ಷಿ ಮುಂದವರೆದು ಜಮೀನು ಇದೆ ಎಂದು ಹೇಳುತ್ತಾರೆ. ನನ್ನ ಅಜ್ಜನಿಗೆ ಸರ್ವೆ ನಂಃ 319 ಜಮೀನು ಇದೆ . ಆ ಜಮೀನು ಎಷ್ಟು ಎಕರೆ ಎಷ್ಟು ಗುಂಟೆ ಇದೆ ಎಂದರೆ ನನಗೆ ಗೋತ್ತಿಲ್ಲ. ನನ್ನ ಅಜ್ಜನ ಡಾಕುವಿನ ಜಮೀನಿನಲ್ಲಿ ಅವರ ಮಕ್ಕಳಿಗೆ ಪಾಲು ಆಗಿದೆ. ಸರ್ವೆ ನಂಃ 319 ರಲ್ಲಿ ನನ್ನ ತಂದೆಗೆ ಎಷ್ಟು ಪಾಲು ಬಂದಿದೆ ಎಂದು ನನಗೆ ನೆನಪಿಲ್ಲ. ನನ್ನ ಅಜ್ಜ ಡಾಕುನಿಗೆ ಯಾವಾಗಲು ಜಮೀನು ಮತ್ತು ಮನೆ ಇರಲಿಲ್ಲ ಎಂದರೆ ಸರಿಯಲ್ಲ. ನನ್ನಅಜ್ಜನ ಡಾಕುವಿನ ಕಡೆಯಿಂದ ನನ್ನತಂದೆ ನಾಮದೇವರವರಿಗೆ ಜಮೀನು ಮತ್ತು ಮನೆ ಅಗಲಿ ಸಿಕಿಲ್ಲ ಎಂದರೆ ಸರಿಯಲ್ಲ.

ನಾಮದೇವ ಹೆಸರಿನಲ್ಲಿ 3 ಎಕರೆ 20 ಗುಂಟೆ ಜಮೀನು ಇದೆ ಎಂದರೆ ಸರಿ. ಆ ಜಮೀನು ಯಾರಿಂದ ನನ್ನ ತಂದೆ ನಾಮದೇವ ಖರೀದಿ ಮಾಡಿದ್ದಾರೆ ಎಂದರೆ ನನ್ನ ಅಜ್ಜನ ಜಮೀನು ಮಾರಾಟ ಮಾಡಿ ನನ್ನ ತಂದೆ ತಾಯಿಯ ಹೆಸರಿನಲ್ಲಿ ಜಮೀನು ಖರೀದಿ ಮಾಡಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ . ನಮ್ಮ ತಂದಗೆ ನಮ್ಮಅಜ್ಜನಿಂದ ಜಮೀನು ಬಂದಿರುತ್ತದೆ. ನಮ್ಮ ತಂದೆ ಸ್ವಂತ ಗಳಿಸಿ ಜಮೀನು ಖರೀದಿ ಮಾಡಿರುತ್ತಾರೆ. ಆ ಜಮೀನನ್ನು ನನ್ನ ತಂದೆ 5 ನೇ ಪ್ರತಿವಾದಿಯ ಹೆಸರಿಗೆ ಮಾಡಿರುತ್ತಾರೆ ಎಂದರೆ ಸರಿಯಲ್ಲ.

ನನ್ನ ತಂದೆ ಜಮೀನನ್ನು ಯಾರಿಂದ ಖರೀದಿ ಮಾಡಿದ್ದಾರೆಂದು ನನಗೆ ನೆನಪಿಲ್ಲ. ನನ್ನ ತಂದೆಗೆ ಜಮೀನು ಖರೀದಿ ಕೊಟ್ಟವರು ಆಳಂದದವರಿದ್ದು ಅವರ ಹೆಸರು ನನಗೆ ನೆನಪಿಲ್ಲ. ನನ್ನ ತಂದೆ ಆಳಂದವರಿಂದ್ದ ಆ ಜಮೀನು ಖರೀದಿ ಮಾಡಿ 20-22 ವರ್ಷ ಆಯಿತಾ ಎಂದರೆ ನೆನಪಿಲ್ಲ. ನನ್ನ ತಂದೆ ಆಸ್ತಿ ಖರೀದಿ ಮಾಡಿದ ನಂತರ ಅವರ ಹೆಸರಿಗೆ ಪಹಣಿ ದಾಖಲಾಗಿದೆ ಎಂದೆರ ಸರಿ. ಅದು ಸರ್ವೆ ನಂಃ 320 ,3 ಎಕರೆ 20 ಗುಂಟೆ ಎಂದೆರ ಸರಿ. ನನ್ನ ತಂದೆ ಖರೀದಿ ಮಾಡಿದ ಸರ್ವೆ ನಂಃ 320 , 3 ಎಕರೆ 20 ಗುಂಟೆ ಈಗ 5 ನೇ ಪ್ರತಿವಾದಿ ಹೆಸರಿನಲ್ಲಿ ಇದೆ ಎಂದೆರ ಸರಿಯಲ್ಲ. ನಮ್ಮ ತಂದೆಯ ಹೆಸರಿನಲ್ಲಿ ಮನೆಯನ್ನು ಇರಲಿಲ್ಲ ಮತ್ತು ಜೋಪಡಿಯಲ್ಲಿ ಇದ್ದರು ಎಂದರೆ 2 ಪ್ಲಾಟ ಇದ್ದು 1 ಮನೆ ಕಟ್ಟಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ.

ಸದರಿ ಮನೆ ಜಾಗವನ್ನು ನನ್ನ ತಂದೆ ನಾಮದೇವ ಸ್ವಂತ ಗಳಿಸಿ ಖರೀದಿಸಿದ್ದರು ಎಂದೆರ ಸರಿಯಲ್ಲ. 5 ನೇ ಪ್ರತಿವಾದಿ ತನ್ನ ಸ್ವಂತ ಖರ್ಚಿನಿಂದ ಆ ಮನೆ ಕಟ್ಟಿದ್ದಾರೆ ಎಂದೆರ ಸರಿಯಲ್ಲ. ನನ್ನ ತಂದೆಯ ಜಮೀನನ್ನು 5 ನೇ ಪ್ರತಿವಾದಿ ಸಾಗುವಳಿ ಮಾಡುತ್ತಾರೆ ಎಂದರೆ ನಾನು ಕೂಡಾ ಮಾಡಿದ್ದೆನೆ ಅವರು ಕೂಡ ಮಾಡಿರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. ನಾನು ಮದುವೆಯಾಗಿನಿಂದ ಹಳ್ಳಿ ಸಲಗರ ತಾಂಡಾದಲ್ಲಿ ವಾಸವಾಗಿರುತ್ತೇನೆ . ನನ್ನ ಮದುವೆಯಾಗಿ 40 ವರ್ಷ ಆಗಿದೆ ಎಂದರೆ ಆಗಿರಬಹುದು.

5 ಪ್ರತಿವಾದಿ ನಾಮದೇವರಿಗೆ 5 ನೇ ಮಗಳು. 5 ನೇ ಪ್ರತಿವಾದಿ ಮದುವೆಯಾಗಿದ್ದರು ಕೂಡ ನಾಮದವೇವರ ಮನೆಯಲ್ಲಿ ವಾಸವಾಗಿದ್ದಾರೆ ಎಂದರೆ ಸರಿ. 1 ನೇ ಪ್ರತಿವಾದಿ ಮತ್ತು 5 ನೇ ಪ್ರತಿವಾದಿ ಆ ಮನೆಯಲ್ಲಿ ವಾಸವಾಗಿರುತ್ತಾರೆ ಎಂದರೆ ಸರಿ. 5 ನೇ ಪ್ರತಿವಾದಿ 1 ನೇ ಪ್ರತಿವಾದಿಯನ್ನು ನೋಡಿಕೊಂಡು ಹೊಗುತ್ತಿದ್ದಾರೆ ಎಂದರೆ ಸರಿ. ಮುಂದುವರೆದು ನಾನು ಕೂಡ ನೊಡಿದ್ದೇನೆ. ನನ್ನ ತಂದೆಯವರು ತಾಂಡಾದ ಎಲ್ಲಾ ನಾಯಕರನ್ನು ಕರೆಯಿಸಿ ಎಲ್ಲರ ಸಮಕ್ಷಮ ಜಮೀನನ್ನು 5 ನೇ ಪ್ರತಿವಾದಿಗೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಆ ಪ್ರಮುಖ ಪಂಚರಲ್ಲಿ ರಾಮಚಂದ್ರ ಡಾಕು , ಲಕ್ಷ್ಮಣ ಪಾಂಡು ರಾಠೊಢ , ಧನ್ನು ರಾಠೊಢ , ಗೇಮ ದೇವರು , ಪಂಡಿತ ವಿಠಲ್ ಇವರಲ್ಲದೆ ನಾನು ಕೂಡ ಇದ್ದೆ ಎಂದರೆ ಸರಿಯಲ್ಲ. ಈ ಜಮೀನಿನ ಉತ್ಪನವನ್ನು 5 ನೇ ಪ್ರತಿವಾದಿಯರು ತೆಗೆದುಕೊಳ್ಳುತ್ತಿದ್ದಾರೆ ಎಂದರೆ ತಂದೆ ತಾಯಿಗಳನ್ನು ನೋಡಿಕೊಳ್ಳುತಿದ್ದರಿಂದ ತೆಗೆದುಕೊಳ್ಳುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. 5 ನೇ ಪ್ರತಿವಾದಿ ತನನ್ನು ನೋಡಿಕೊಳ್ಳುತ್ತಿದ್ದರಿಂದ ನನ್ನ ತಂದೆ ನಾಮದೇವರವರು ಅವರ ಹೆಸರು ದಾಖಲು ಮಾಡಿದ್ದಾರೆಂದರೆ ನಾನು ಪಾಲು ಕೇಳುತ್ತೆನೆ ಎಂದು 5 ನೆ ಪ್ರತಿವಾದಿ ತನ್ನ ಹೆಸರು ದಾಖಲು ಮಾಡಿಕೊಂಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಆ ಜಮೀನಿನ ಉತ್ಪನ್ನವನ್ನು 5 ನೇ ಪ್ರತಿವಾದಿ ಅವರ ತಂದೆಯನ್ನು ನೋಡಿಕೊಳ್ಳುತಿದ್ದರಿಂದ ಅನುಭವಿಸುತ್ತಿದ್ದಾರೆ ಎಂದರೆ ಸರಿ.

22 ವರ್ಷಗಳಿಂದ 5 ನೇ ಪ್ರತಿವಾದಿ ಆ ಜಮೀನಿನ ಮಾಲಿಕಳು ಇದ್ದಾಳೆ ಎಂದೆರ ನನಗೆ ಗೋತ್ತಿಲ್ಲ. ನಮ್ಮ ತಂದೆಗೆ ತೋಡೆಗೆ Fracture ಆಗಿದ್ದರಿಂದ ಅತನನ್ನು 5 ನೇ ಪ್ರತಿವಾದಿ ಬಾಂಬೆಗೆ ಕರೆದುಕೊಂಡು ಹೋಗಿ ಚಿಕಿತ್ತೆ ಕೊಡಿಸಿ ವಾಪಸ್ಸು ಕರೆಸಿಕೊಂಡು ಬಂದು ನಂತರ ತಂದೆ ಉರಲ್ಲಿ ಮೃತಪಟ್ಟಿದ್ದಾರೆ ಎಂದರೆ ಸರಿ. ನನ್ನ ತಂದೆಯ ಚಿಕಿತ್ತೆಗೆ 2 ಲಕ್ಷ ರೂಪಾಯಿ 5 ಪ್ರತಿವಾದಿ ಖರ್ಚು ಮಾಡಿದ್ದಾರೆ ಎಂದರೆ ಸರಿಯಲ್ಲ.

ಕೇಸುಬಾಯಿ ಮತ್ತು ಪಾರ್ವತಿ ಇಬ್ಬರು ಸೇರಿ 1 ಜಮೀನು ಖರೀದಿ ಮಾಡಿದ್ದಾರೆ ಎಂದರೆ ಸರಿ. ನಂತರ ಆ ಜಮೀನನ್ನು ಕೇಸುಬಾಯಿ ಮತ್ತು ಪಾರ್ವತಿ ಇಬ್ಬರು ಸೇರಿ ಹಂಚಿಕೊಂಡಿದ್ದಾರೆ ಎಂದರೆ ಸರಿ. ಕೇಸುಬಾಯಿಯವರಿಗೆ 4 ಎಕರೆ 29 ಗುಂಟೆ ಜಮೀನು ಬಂದಿದ್ದು ಉಳಿದ ಜಮೀನು ಪಾರ್ವತಿರವರಿಗೆ ಹೊಗಿತ್ತೆಂದು ಎಂದರೆ ಸರಿ. ನನ್ನ ತಾಯಿ ಕೇಸುಬಾಯಿ ಆ ಜಮೀನು ಸಾಗುವಳಿ ಮಾಡುತ್ತಾರೆ ಎಂದರೆ ಸರಿ.

ನನ್ನ ತಾಯಿಗೆ 90 ವರ್ಷ ವಯಸ್ಸಾಗಿದೆ ಎಂದರೆ ನನಗೆ ಗೋತ್ತಿಲ್ಲ. ನನ್ನ ತಾಯಿ 11 ವರ್ಷಗಳ ಹಿಂದೆಪಿ 1 ಮೃತ್ಯು ಪತ್ರ ಮಾಡಿದ್ದು ತಾನು ತೀರಿಕೊಂಡ ನಂತರ ತನ್ನ ಆಸ್ತಿ 5 ನೇ ಪ್ರತಿವಾದಿಗೆ ಹೊಗಬೇಕೆಂದು ಬರೆದಿದಾರೆ ಎಂದರೆ ಸರಿಯಲ್ಲ. 5 ನೇ ಪ್ರತಿವಾದಿ ಹೆಸರಿನಲ್ಲಿ ಟ್ರಾಕ್ಟರ ಖರೀದಿ ಮಾಡಲಾಗಿದೆ ಎಂದರೆ ನನ್ನ ಮಗ ಖರೀದಿ ಮಾಡಿದ್ದಾರೆ ಎಂದು ಸಾಕ್ಷಿ ಹೇಳುತ್ತಾರೆ. ಆ ಟ್ರಾಕ್ಟರಿನ ಎಲ್ಲಾ ದಾಖಲೆಗಳನ್ನು 5 ನೇ ಪ್ರತಿವಾದಿಯ ಹೆಸರಿನಲ್ಲಿ ಇದೆ ಎಂದರೆ ನನಗೆ ಗೋತ್ತಿಲ್ಲ. ನನ್ನ ಮಗ ಟ್ರಾಕ್ಟರನ್ನು ಹಡಗಿ ಹೊಡೆಯತ್ತೆನೆ ಅಂತ ಹೇಳಿ ದಾಖಲೆಗಳನ್ನು ತೆಗೆದುಕೊಂಡು ಹೋಗಿದ್ದು ಅವುಗಳನ್ನು ವಾಪಸ ಕೊಡದೆ ಇದುದಕ್ಕೆ ಪೋಲಿಸ ಠಾಣೆಗೆ ದೂರು ದಾಖಲು ಮಾಡಿದ್ದಾರೆ ಎಂದರೆ ನನಗೆ ಗೋತ್ತಿಲ್ಲ. ಪೊಲಿಸರು ಟ್ರಾಕ್ಟರನ್ನು ತೆಗೆದುಕೊಂಡು ಬಂದು ನನ್ನ ಮಗನ ಮಾತು ಕೇಳಿ ಆತನಿಗೆ ಟ್ರಾಕ್ಟರ ವಾಪಸ ನೀಡಿದ್ಮರಿಂದ ನನ್ನ ಮಗನ ವಿರುದ್ದ 5 ನೇ ಪ್ರತಿವಾದಿ ಖಾಸಗಿ ದೂರನ್ನು JMFC ಕೊರ್ಟಿನಲ್ಲಿ ಕೊಟ್ಟಿದ್ದಾರೆ ಎಂದರೆ ನನಗೆ ಗೋತ್ತಿಲ್ಲ. ನನ್ನ ಮಗನ ಹೆಸರು ಸುನೀಲ ಆತ ಇವತ್ತು ನ್ಯಾಯಾ ಲಯಕ್ಕೆ ಬಂದಿರುವುದಿಲ್ಲ. ನನ್ನ ಹಿರಿಯ ಮಗ ಆನಂದ ಸರ್ಕಾರಿ ನೌಕರಿಯಲ್ಲಿರುತ್ತಾನೆ. ನನ್ನ ಹಿರಿಯ ಮಗ ಆನಂದ ಇತ ಅಳಂದ ತಾಲ್ಲೂಕಿನಲ್ಲಿ ಬಾರಿ ಪ್ರಭಾವ ಹೊಂದಿದ್ದಾನೆ ಎಂದರೆ ನನಗೆ ಗೋತ್ತಿಲ್ಲ. 5 ನೇ ಪ್ರತಿವಾದಿ ನನ್ನ ಮಕ್ಕಳು ಆನಂದ , ಸುನೀಲ ಮತ್ತು ನನ್ನ ಮೇಲೆ ಕೂಡಾ ಕೇಸು ಮಾಡಿದ್ದಾರೆ ಎಂದರೆ ನನಗೆ ಗೋತ್ತಿಲ್ಲ. ನನಗೆ ಯಾವುದೆ ಆಸ್ತಿಯಲ್ಲಿ ಹಿಸ್ಸಾ ಬೇಡುವ ಹಕ್ಕಿಲದಿದ್ದರು ಕೂಡ ಸುಳ್ಳು ಕೇಸು ಹಾಕಿದ್ದೇನೆ ಎಂದರೆ ಸರಿಯಲ್ಲ.

ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ ಹೇ ಕೇ ಸರಿ ಇದೆ

**ಹಿರಿಯ ಸಿವಿಲ್ ನ್ಯಾಯಾಧೀಶರು**
**ಆಳಂದ**